ತಮ್ಮ ಮೊಬೈಲ್ ಫೋನಿನಲ್ಲಿಯೇ ಮುಳುಗಿಹೋಗಿ, ತಮ್ಮ ಹತ್ತಿರ ಇರುವ ಅಜ್ಜಿ-ಅಜ್ಜಂದಿರನ್ನು ಮರೆತಿರುವುದು. 'ಅಜ್ಜಿ, ನಿಮ್ಮಮ್ಮ ನಿನಗೆ ಯಾವ ಜೋಗುಳ ಹಾಡುತ್ತಿದ್ದಳು?', 'ಅಜ್ಜಿ ನಿನ್ನ ಮದುವೆ ಹೇಗಾಯಿತು?' ಎಂದು ಕೇಳಿ ಯಾಕೆ ದಾಖಲಿಸುತ್ತಿಲ್ಲ? ಇವೆಲ್ಲಾ ಅತ್ಯಂತ ಸುಲಭದ ಕೆಲಸಗಳಾದರೂ ನಾವು ಯಾಕೆ ಮಾಡುತ್ತಿಲ್ಲ? ನಾವು ಟಿಕ್-ಟಾಕ್ ವೀಡಿಯೋ ಮಾಡುತ್ತಿದ್ದೇವೆ. ಆದರೆ ನಮ್ಮ ಪೂರ್ವಜರ ಇತಿಹಾಸವನ್ನು ದಾಖಲಿಸಲು ಮರೆಯುತ್ತಿದ್ದೇವೆ. 'ಅಜ್ಜಿ, ಒಂದು ಕತೆ ಹೇಳು...' ಅಂತ ಕೇಳಿದರೆ ನಾವೆಲ್ಲರೂ ಎ.ಕೆ. ರಾಮಾನುಜನ್ ಆಗಬಹುದು. ಈಗ ತಂತ್ರಜ್ಞಾನವೂ ಲಭ್ಯವಿದೆ. ನನಗೆ ಈ ಸೋಜಿಗ ಅರ್ಥ ಆಗುತ್ತಿಲ್ಲ. ನಿಮ್ಮ ಸುತ್ತಲೂ ಜೀವಂತ ಕಥನಗಂಟುಗಳು (Archive) ಓಡಾಡುತ್ತಿವೆ. ನಮ್ಮ ಕುಟುಂಬ ವ್ಯವಸ್ಥೆಯ ಬಗ್ಗೆ ಅತಿ ರಂಜನೀಯವಾಗಿ ಹೊಗಳಿಕೊಳ್ಳುತ್ತೇವೆ. ಆದರೆ ಆಚರಣೆಯಲ್ಲಿ ನಮ್ಮ ಹಿರಿಯರ ಕಡೆ ನಾವು ಗೌರವದಿಂದ ನೋಡುತ್ತಿಲ್ಲ.

**◆ ಬಾಲಿವುಡ್ ನಿಮ್ಮ ಬಾಲ್ಯದ ದೊಡ್ಡ ಮನೋರಂಜನೆಯಾಗಿತ್ತು. ಮುಂಬಯಿಯಲ್ಲಿ ಬದುಕಿದವರೆಲ್ಲರಿಗೂ ಬಾಲಿವುಡ್ ಅತ್ಯಂತ ಆಪ್ತ ಸಂಗತಿ. ಬಾಲಿವುಡ್ ನಟಿಯರ ಜೀವನ ಚರಿತ್ರೆಗಳನ್ನೂ ನೀವು ಬರೆದಿರುವಿರಿ. ಈಗ ಬಾಲಿವುಡ್ ನಿಮಗೆ ಹೇಗನ್ನಿಸುತ್ತದೆ?**

ನಾನು ಈಗ ಬಾಲಿವುಡ್ ನೋಡಲಾರೆ. ಬಾಲಿವುಡ್‌ನ ಬಲಪಂಥೀಯ ಮನೋಧರ್ಮ ನನ್ನ ಎದೆ ಒಡೆಯುವಂತೆ ಮಾಡಿದೆ. ಅಮಿತಾಬ್ ಬಚ್ಚನ್ ಒಮ್ಮೆ ಹೇಳಿದ್ದರು: 'ಹಿಂದೂ, ಮುಸ್ಲಿಂ, ಕ್ರೈಸ್ತರೆಲ್ಲರೂ ಒಂದೆಡೆ ಕತ್ತಲಲ್ಲಿ ಕುಳಿತು ಒಂದು ಕತೆಯನ್ನು ನೋಡುವಂತಹ ಪವಿತ್ರ ಸ್ಥಳ ಸಿನಿಮಾಮಂದಿರ ಬಿಟ್ಟರೆ ಮತ್ತೊಂದಿಲ್ಲ' ಅಂತ. ಆ ಗೌರವ ಈಗ ಇಲ್ಲ. ಅದು ನನಗೆ ಅತ್ಯಂತ ದುಃಖದ ಸಂಗತಿಯಾಗಿದೆ. ಪ್ರೇಕ್ಷಕರನ್ನು ಒಗ್ಗೂಡಿಸುವುದು ಹೇಗೆ, ಒಡೆಯುವುದು ಹೇಗೆ ಅಂತ ನಿರ್ಧರಿಸಿ ಸಿನಿಮಾ ಮಾಡುವ ಗೂಂಡಾಗಿರಿಯ ಮನೋಭಾವ ನೋಡಿದಾಗ ದುಃಖವಾಗುತ್ತದೆ, ಭಯವಾಗುತ್ತದೆ. ಮೊದಲೆಲ್ಲಾ ಯಾವುದೇ ಪೂರ್ವಗ್ರಹವಿಲ್ಲದೆ ಬಾಲಿವುಡ್ ಸಿನಿಮಾ ನೋಡಲು ಹೋಗುತ್ತಿದ್ದೆ. ಆ ಸಿನಿಮಾಗಳಲ್ಲಿ ಸಾಮಾನ್ಯವಾಗಿ ರೋಸಿ ಎನ್ನುವ ಸ್ಟೆನೋಗ್ರಾಫರ್ ಇರುತ್ತಾಳೆ ಎಂದು ಗೊತ್ತಿರುತ್ತಿತ್ತು. ಅವಳು ರೋಮನ್ ಕ್ಯಾಥೋಲಿಕ್ ಧರ್ಮದ ಸಡಿಲ ನಡತೆಯ ಹೆಣ್ಣಾಗಿರುತ್ತಿದ್ದಳು. ಅದನ್ನು ಗಮನಿಸಿಯೂ ಅಷ್ಟೇನೂ ಬೇಸರವಾಗುತ್ತಿರಲಿಲ್ಲ. ಅದನ್ನು ನಾನು ನುಂಗಿಕೊಳ್ಳಬಹುದಾಗಿತ್ತು. ಅದರ ಹಿಂದೆ ಒಂದು ಬಗೆಯ ಪ್ರೀತಿಯೇ ನನಗೆ ಕಾಣುತ್ತಿತ್ತು. ಈಗ ಅಂತಹ ಯಾವ ಪ್ರೀತಿಯೂ ಇಲ್ಲ. ಎಲ್ಲರೂ ಧರ್ಮಜಾಗೃತರಾಗಿದ್ದಾರೆ. ಹಾಗಾಗಿ ನಂಗೆ ಬಾಲಿವುಡ್ ನೋಡಲು ಸಾಧ್ಯವಿಲ್ಲ.

ಬಹುಶಃ ಬಾಲಿವುಡ್ ಮುಂದೆ ಸಾಗದಂತಹ ದೊಡ್ಡ ತಡೆಗೋಡೆ ಎದುರಾಗಿದೆ. ಯಾಕೆಂದರೆ ಜನರಿಗೆ ಬಿಡುವಿನ ಸಮಯ ಹೆಚ್ಚು ಸಿಗುತ್ತಿಲ್ಲ. ಮುಂಚೆ ಎಲ್ಲಾ ಸಿನಿಮಾಗಳು ಮೂರು ತಾಸಿನವಾಗಿದ್ದವು. 'ಲಗಾನ್' ಮೂರೂವರೆ ತಾಸಿನ ಸಿನಿಮಾ. ಆಗ ಯಾರೂ ಅದೊಂದು ದೊಡ್ಡ ಸಿನಿಮಾ ಅಂತ ತಕರಾರು ಮಾಡಿದ್ದು ನನಗೆ ನೆನಪಾಗುತ್ತಿಲ್ಲ. ನನ್ನ ಗೆಳೆಯ ನರೇಶ್ ಫರ್ನಾಂಡಿಸ್ ಒಬ್ಬನ್ನ ಬಿಟ್ಟರೆ (ನಗು)... ಅವನು ಹೆಚ್ಚಾಗಿ ಸಿನಿಮಾ ನೋಡ್ತಿರಲಿಲ್ಲ. ನನ್ನ ಜೊತೆ 'ಲಗಾನ್' ನೋಡಲು ಬಂದಿದ್ದ. ಮಧ್ಯಂತರ ಬಂದಾಗ 'ಡಿನ್ನರ್‌ಗೆ ಯಾವ ಹೋಟೆಲಿಗೆ ಹೋಗೋಣ' ಅಂತ ಕೇಳಿದ. ನಾನು 'ಇನ್ನೂ ಸಿನಿಮಾ ಮುಗಿದಿಲ್ಲ...' ಅಂತ ನಗತೊಡಗಿದೆ. ಅವನು ತನ್ನ ವಾಚನ್ನು ನೋಡಿ,

> ನನಗೆ ಅಚ್ಚರಿಯಾಗುವುದೇನೆಂದರೆ, ನಮ್ಮ ಯುವಕರು ತಮ್ಮ ಮೊಬೈಲ್ ಫೋನಿನಲ್ಲಿಯೇ ಮುಳುಗಿಹೋಗಿ, ತಮ್ಮ ಹತ್ತಿರ ಇರುವ ಅಜ್ಜಿ–ಅಜ್ಜಂದಿರನ್ನು ಮರೆತಿರುವುದು. 'ಅಜ್ಜಿ, ಒಂದು ಕತೆ ಹೇಳು' ಅಂತ ಕೇಳಿದರೆ ನಾವೆಲ್ಲರೂ ಎ.ಕೆ. ರಾಮಾನುಜನ್ ಆಗಬಹುದು.